ಕಾಣತದ. ಯವಾಗಲೂ ಮುಖಕ್ಕಿಂತ ತಲೆ ಗೂದಲು ಕಪ್ಪಿರಬೇಕು. ಇನ್ನೊಂದು ಸಾರಿ ಬಣ್ಣ ಹಚ್ಚಿಸಿಕೋ' ಅಂದರು. ಅವ ಇನ್ನೊಮ್ಮೆ ಗಾರ್ನಿಯರ್ ಕಪ್ಪು ಬಣ್ಣ ಹಚ್ಚಿದನಲೆ. ಅದು ಫಾರಿನ್‌ನಿಂದ ತರಿಸಿದ್ದು. ಗೌಡರು ಅದನ್ನೇ ಹಚಿಗಂತಾರ' ಎಂದು ತಲೆಗೂದಲನ್ನು ಬಾಚಿಕೊಂಡ. ಅಮಾಸೆಯಂಥ ಮುಖಕ್ಕೆ ಸ್ಯಾಂಡಲ್ ಕ್ರೀಮು ಮೆತ್ತಿಗಂಡು ಪಾಂಡ್ಸ್ ಪೌಡರನ್ನು ತೆಳ್ಳಗೆ ಬಡಕೊಂಡ. ಬಾಟಲಿಯಲ್ಲಿದ್ದ ಸೇಂಟನ್ನು ಮೈತುಂಬಾ ಹೊಡಕೊಂಡ. ಅದರ ವಾಸನೆಗೆ ಸುಂದರನಿಗೆ ವಾಂತಿ ಬಂದಂಗ ಆಯಿತು.

'ಅದೇನಪೋ ಅಷ್ಟು ವಾಸನೆ ಐತಿ'

'ಲೇ ಮಬ್ಬು ಸೂಳೆಮಗನೆ. ಅದೆಲ್ಲಾ ನಿನಗ ತಿಳೇದಿಲ್ಲ. ಇದನ್ನು ಫಾರೆನ್ನಿಂದ ತಂದದ್ದು. ಮಾಯಪ್ಪಗೌಡರ ಮಗ ವಾಗೀಶ ಅಮೆರಿಕಾದಾಗ ಓದುತ್ತಾನಲೆ. ಅವರಪ್ಪಗ ಕಳಿಸಿದ್ದ. ಅದನ್ನ ಗೌಡರು ನನಗೊಂದು ಕೊಟ್ಟಾರ. ಈಗ ಹೊರಗ ಹೋಗಣ ಜನ ಮೈ ಮ್ಯಾಗ ಬೂಳ್ತಾರ.ಅವರ ಬೆವರ ವಾಸನೆ ತಡಕಳ್ಳಾಕ ಆಗಾದಿಲ್ಲ. ಇದನ್ನೀಟು ಮೈಗಿ ಹೊಡಕಂಡರ ಅವರ ವಾಸನಿ ಅಷ್ಟೊಂದು ಬಡೇದಿಲ್ಲ. ಇವರೌವನ ನನ ಭೇಟಿಯಾಗಕ ಮೈಯರ ತೊಳಕಂಡು ಬರಬೇಕು. ಇಲ್ಲ ಹಲ್ಲರ ತಿಕ್ಕಂಡು ಬರಬೇಕು. ಅವರನ್ನ ನೋಡಾಕ ಹೇಸಿಗಿ ಅನಿಸಿತದಲೇ...ಏನೋ ಗೌಡರು

